

ಹಸಿರಿಗೆ ಹಾತೊರೆಯುತ್ತಿರುವಂತೆ ಕಾಣಿಸುವ ಲಂಡನ್ ನಗರ

'ಪೆಡ್ಲ್ ಫಾರ್ ಪ್ಲಾನೆಟ್' ಎನ್ನುವುದು ನಮ್ಮಲ್ಲಿಯ ವರ್ಷದ ಸಂಭ್ರಮ. ರಿಯಲ್ ಎಸ್ಟೇಟ್ ಡೆವಲಪರ್ ಕಂಪನಿಯಾದ ನಾವು, ಪ್ರಕೃತಿಯೆಡೆಗಿನ ನಮ್ಮ ಬದ್ಧತೆಯನ್ನು ಸಾಬೀತುಪಡಿಸುವ ಸಲುವಾಗಿ ಪ್ರತಿ ವರ್ಷವೂ ನಡೆಸುವ ಕಾರ್ಯಕ್ರಮವದು. ಸೈಕಲ್ ಪೆಡ್ಲ್ ತುಳಿಯುವುದರ ಮಹತ್ವ ಸಾರುತ್ತ, ಅದರಿಂದ ಪರಿಸರಕ್ಕೂ, ಪ್ರತಿ ವ್ಯಕ್ತಿಗೂ ಆಗುವ ಲಾಭವನ್ನು ಎಲ್ಲರಿಗೂ ತಿಳಿಯಪಡಿಸುವುದು ಈ ಕಾರ್ಯಕ್ರಮದ ಉದ್ದೇಶ. ಈ ಸೈಕಲ್ ಓಡಿಸುವ (ಸೈಕ್ಲಥಾನ್) ಸ್ಪರ್ಧೆ ಸಣ್ಣ ಪ್ರಮಾಣದ್ದೇನಲ್ಲ. ಅಂತರರಾಷ್ಟ್ರೀಯ ಸೈಕ್ಲಿಂಗ್ ಪಟುಗಳನ್ನೂ ಈ ಸ್ಪರ್ಧೆಗೆ ಆಹ್ವಾನಿಸಲಾಗುತ್ತದೆ. ಖುದ್ದು ರಾಜ್ಯದ ಮುಖ್ಯಮಂತ್ರಿಗಳೇ ಇದಕ್ಕೆ ಹಸಿರು ನಿಶಾನೆ ತೋರಿಸಲು ಬರುತ್ತಾರೆ. ಬಹುಮಾನ ವಿತರಣೆ ಯಾವುದಾದರೂ ಪ್ರಸಿದ್ಧ ಸಿನಿ ತಾರೆಯಿಂದಲೇ ಆಗುತ್ತದೆ. ಬಹುಮಾನದ ಮೊತ್ತ ಹಲವು ಲಕ್ಷಗಳನ್ನು ದಾಟುತ್ತದೆ.



ನಮ್ಮ ಕಂಪನಿಯಲ್ಲಿ ಇದರ ತಯಾರಿ ಸುಮಾರು ಮೂರ್ನಾಲ್ಕು ತಿಂಗಳುಗಳ ಮೊದಲೇ ಶುರುವಾಗುತ್ತದೆ. ಉಳಿದ ಸ್ಪರ್ಧಿಗಳ ಜೊತೆ ಯಾವ್ಯಾವ ಸೆಲೆಬ್ರಿಟಿಗಳು ಪೆಡಲ್ಲು ತುಳಿದರೆ ಕಾರ್ಯಕ್ರಮಕ್ಕೆ ರಂಗು ಬರುತ್ತದೆ, ಯಾವ್ಯಾವ ಕೆಟಗರಿಯ ಸ್ಪರ್ಧೆಗಳನ್ನು ಇಟ್ಟರೆ ಹೆಚ್ಚು ಜನರು ಭಾಗವಹಿಸುವಂತೆ ಮಾಡಬಹುದು, ನಗರದ ಯಾವ್ಯಾವ ರಸ್ತೆಗಳಲ್ಲಿ ರೇಸಿನ ಸೈಕಲ್ ಓಡಬೇಕು, ಎಲ್ಲೆಲ್ಲಿ ಕಂಪನಿಯ ಬ್ಯಾನರುಗಳನ್ನು ಹಾಕಬೇಕು, ಟ್ರಾಫಿಕ್ ಕಂಟ್ರೋಲ್ ಹೇಗೆ, ಸರಕಾರದ ಅನುಮತಿ ಹೇಗೆ, ಸ್ಪರ್ಧಾಳುಗಳಿಗೆ ಯಾವ ಬಣ್ಣ–ವಿನ್ಯಾಸದ ಟಿ–ಶರ್ಟ್ ಸೂಕ್ತ, ಅವರಿಗೆ ನೀಡುವ ಶಕ್ತಿವರ್ಧಕ ಪಾನೀಯ ಯಾವ ಬ್ರಾಂಡಿನದು... ಒಂದೇ, ಎರಡೇ? ಈ ಇಲಾಖೆಯಲ್ಲಿ ಕೆಲಸ ಮಾಡುವ ನಮಗೆ ಹಗಲು ರಾತ್ರಿಗಳೆನ್ನದ ಒತ್ತಡದ ಕೆಲಸ.

ಆ ಕಾರ್ಯಕ್ರಮದ ದಿನವಂತೂ ಜಾತ್ರೆಗೂ ಮಿಗಿಲಾದ ಸಡಗರ. ಬೆಂಗಳೂರಿನ ಹೊರವಲಯದಲ್ಲಿ ಹೊಸದಾಗಿ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿರುವ ಎಂಟುನೂರು ಮರಗಳನ್ನು ಕಡಿಯುವ ಅನುಮತಿಗಾಗಿ ಲಂಚದ ಹಣವನ್ನು ಆಗಷ್ಟೇ ಮಂಜೂರು ಮಾಡಿ ಬಂದ ಕಂಪನಿಯ ಅಧ್ಯಕ್ಷನಿಂದಲೇ 'ಪೆಡ್ಲ್ ಫಾರ್ ಪ್ಲಾನೆಟ್' ಕಾರ್ಯಕ್ರಮದ ಉದ್ಘಾಟನಾ ಭಾಷಣ. ವಾಹನ ಬಳಕೆಯಿಂದ ಹೆಚ್ಚಾಗುವ ಇಂಗಾಲ ಡೈಆಕ್ಸೈಡ್ ಪ್ರಮಾಣ, ಗ್ಲೋಬಲ್ ವಾರ್ಮಿಂಗ್, ಹವಾಮಾನ ವೈಪರೀತ್ಯ ಈ ಎಲ್ಲಾ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಿದ ನಂತರ ಕೊನೆಯಲ್ಲಿ ಆತ – 'ವಾರದಲ್ಲಿ ಕನಿಷ್ಠ ಒಂದು ದಿನವಾದರೂ ನಾವೆಲ್ಲ ವಾಹನದ ಬದಲಾಗಿ ಸೈಕಲ್ ಬಳಸುವ ಶಪಥ ಮಾಡೋಣ' ಎಂದಾಗ, ಚಪ್ಪಾಳೆಯ ಸುರಿಮಳೆ.

ಹೀಗೆ ಕಟ್ಟಡಗಳ ನಿರ್ಮಾತೃಗಳೆಲ್ಲ ತಮ್ಮ ಪರಿಸರ ಕಾಳಜಿಯನ್ನು ಜಗತ್ತಿಗೆ ಪ್ರಚುರಪಡಿಸಲು ಹೊಸ ಹೊಸ ನಮೂನೆಯನ್ನು ಶೋಧಿಸುತ್ತಲೇ ಇರುತ್ತಾರೆ. ಅವುಗಳಲ್ಲಿ ಇತ್ತೀಚೆಗೆ ಮುನ್ನೆಲೆಗೆ ಬಂದಿರುವುದು 'ಗ್ರೀನ್ ಬಿಲ್ಡಿಂಗ್' ಎನ್ನುವ ಕಾನ್ಸೆಪ್ಟು. ತಾವು ಎತ್ತಿ ನಿಲ್ಲಿಸುತ್ತಿರುವ ಉದ್ದುದ್ದದ ಇಮಾರತುಗಳೆಲ್ಲ 'ಗ್ರೀನ್ ಬಿಲ್ಡಿಂಗ್'ಗಳಾಗಿವೆ ಎಂದು ಘೋಷಿಸುವುದು.

'ಗ್ರೀನ್' ಹಾಗೂ 'ಬಿಲ್ಡಿಂಗ್' ಇವೆರಡೂ ವಾಸ್ತವದಲ್ಲಿ ವಿರುದ್ಧ ಪದಗಳಾಗಿರುವಾಗ, 'ಇದೇನಪ್ಪ ಇದು ಹಸಿರು ಕಟ್ಟಡ?' ಎನ್ನುವ ಗೊಂದಲ ಮೂಡುವುದು ಸಹಜ. ನೆಲ ಅಗೆಯುವುದರಿಂದ ಶುರುವಾಗಿ ಬಣ್ಣ ಧರಿಸಿ ನಿಲ್ಲುವವರೆಗೂ ನಮ್ಮಿಂದ ಪರಿಸರಕ್ಕೆ ಯಾವುದೇ ಹಾನಿಯಾಗಿಲ್ಲ ಹಾಗೂ ಇನ್ನು ಮುಂದೂ ಹಾನಿ ಆಗುವುದಿಲ್ಲ ಎನ್ನುವ ಪ್ರಮಾಣ ಪತ್ರ ಪಡೆದಿರುವ ಕಟ್ಟಡಗಳಿಗೆ 'ಗ್ರೀನ್ ಬಿಲ್ಡಿಂಗ್' ಅನ್ನುತ್ತಾರೆ. ಪರಿಸರಕ್ಕೆ ಕಡಿಮೆ ಹಾನಿಯಾಗುವಂತಿದ್ದರೆ 'ಗ್ರೀನ್ ಗೋಲ್ಡ್', ಇನ್ನೂ ಕಡಿಮೆ ಹಾನಿಯಾದರೆ 'ಗ್ರೀನ್ ಪ್ಲಾಟಿನಮ್' – ಹೀಗೇ ಬಗೆಬಗೆಯ ಸರ್ಟಿಫಿಕೇಟುಗಳನ್ನು ಈ ಕಟ್ಟಡಗಳು ಪಡೆದುಕೊಳ್ಳಬಹುದು. ಕಟ್ಟಡ ಕಾಮಗಾರಿಯಲ್ಲಿ ನೀವು ಬಳಸಿದ ಕಟ್ಟಿಗೆ 'ಕಡಿಯುವ ಉದ್ದೇಶಕ್ಕೆಂದೇ ಬೆಳೆಸಿದ' ಮರದ್ದೇ? ಉಪಯೋಗಿಸುವ ಉಳಿದ ಸಾಮಾನುಗಳಲ್ಲಿ ರಿಸೈಕಲ್ ಆದ ಪದಾರ್ಥಗಳು ಯಾವುವು? ಹವಾನಿಯಂತ್ರಕ ಯಂತ್ರ ಹೊರಸೂಸುವ ವಿಷಕಾರಿ ಅನಿಲ ಅದೆಷ್ಟು ಕಡಿಮೆ ಪ್ರಮಾಣದಲ್ಲಿ ವಾತಾವರಣವನ್ನು ಕಲುಷಿತಗೊಳಿಸುತ್ತಿದೆ?... ಹೀಗೇ ನೂರಾರು ಸಂಗತಿಗಳನ್ನು ಪರಿಶೀಲಿಸಿ, ಅವುಗಳಲ್ಲಿ ಹೆಚ್ಚು ಅಂಕ ಪಡೆದದ್ದು ಹಸಿರು ಕಟ್ಟಡವಾಗುತ್ತದೆ. ಒಂದು ವೇಳೆ ನಿರ್ದಿಷ್ಟ ಅಗತ್ಯಗಳನ್ನು ಪಾಲಿಸಲಾಗದೇ ಅಂಕ ಪಡೆಯುವಲ್ಲಿ ವಿಫಲರಾದರೆ, ಲಂಚ ನೀಡಿ